ಖಾನೇಷುಮಾರಿ ನಂ. ೨೪ ಗರುಡಿ ಮನೆ ಬಂಜರು ಜಾಗ ಎಂದು ದಾಖಲೆ ಇದ್ದು ಅದನ್ನು ಕೆಂಚ ವೀರಪ್ಪ ಬಿನ್ ಹೊಳೆಯಪ್ಪ ಎಂದು ಮಾಡಿ ಇವರೇ ಮಾಡಿಕೊಂಡಿದ್ದಾರೆ. ಖಾನೇಷುಮಾರಿ ನಂ. ೧ ರಲ್ಲಿ ಯಾವ ಆಧಾರವಿಲ್ಲದೆ ಅವರ ಹೆಸರಿಗೆ ಖಾತೆ ಮಾಡಿಕೊಂಡಿದ್ದಾರೆ. ಈ ರೀತಿ ಹತ್ತಾರು ಪ್ರಕರಣಗಳಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರೂ ಈ ಬಗ್ಗೆ ಸರಿಯಾದ ಆಡಿಟ್ ಆಗದೇ ಇದನ್ನು ಮುಚ್ಚಿ ಹಾಕುವ ಪ್ರಯತ್ನವನ್ನು ಈ ಹಿಂದೆ ಇದ್ದ ಕೆಲವು ಅಧಿಕಾರಿಗಳು ಮಾಡಿದ್ದಾರೆ. ಆದ್ದರಿಂದ ಈ ಬಗ್ಗೆ ವಿಶೇಷ ತನಿಖೆ ಮಾಡಿಸಿ ತಪ್ಪಿಸ್ಥರ ಮೇಲೆ ಕ್ರಮ ಕೈಗೊಳ್ಳುವ ಸಾರ್ವಜನಿಕ ಮಹತ್ವವಾದ ಈ ವಿಷಯದ ಬಗ್ಗೆ ಸರ್ಕಾರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಈ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಈ ಸಭೆಯಲ್ಲಿ ಉತ್ತರ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ.

(೬) ರಾಜ್ಯದಾದ್ಯಂತ ಪೌರ ಕಾರ್ಮಿಕರ ಮುಷ್ಕರದ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದಾದ್ಯಂತ ಪೌರ ಕಾರ್ಮಿಕರು ತಮ್ಮ ನ್ಯಾಯ ಯುತ ಬೇಡಿಕೆಗಳಿಗಾಗಿ ಹೋರಾಟದ ದಾರಿಗೆ ಇಳಿದಿದ್ದು ಅವರ ಮುಷ್ಕರದಿಂದಾಗಿ ನಗರ ಪ್ರದೇಶ ಗಳು ಕೊಳಚೆಯಿಂದ ತುಂಬಿದ್ದು ಈ ನಗರವಾಸಿಗಳಿಗೆ ತೊಂಬಾ ತೊಂದರೆಯಾಗಿದೆ. ಅವರ ನ್ಯಾಯ ವಾದ ಬೇಡಿಕೆ, ಅವರ ಸಂಬಳ ಸಾರಿಗೆಯನ್ನು ಟ್ರೆಜರಿಯಿಂದ ಕೊಡುವಂತಾಗಬೇಕು ಎನ್ನುವುದು. ಇದು ನ್ಯಾಯುತವಾದ ಬೇಡಿಕೆ ಕೂಡ ಆಗಿದೆ, ಅವರ ಇತರೇ ಬೇಡಿಕೆಗಳಲ್ಲಿ ಬಹಳವಾಗಿ ಒಪ್ಪು ವಂಥಾದ್ದು ಇದೆ. ಈಗಿನ ಮುಷ್ಕರದಿಂದಾಗಿ ಆಗಿರುವ ತೊಂದರೆಯನ್ನು ಸದನದ ಗಮನಕ್ಕೆ ತರುವುದು ಬಹಳ ಮುಖ್ಯ. ಇದು ಬಹಳ ಮುಖ್ಯವಾದ ಸಮಸ್ಯೆಯಾದುದರಿಂದ ಈ ಗಮನ ಸೆಳೆಯುವ ಸೂಚನೆಯನ್ನು ತ್ವರ್ಯ ಮೂಲಕ ತರುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ಇನ್ನೂ ಕೆಲವು ಸದಸ್ಯರು ಕೊಟ್ಟಿದ್ದಾರೆ. ಮಾನ್ಯಮಂತ್ರಿಗಳು ಇಲ್ಲ, ಇದು ಬಹಳ ಮುಖ್ಯವಾದ ಸಮಸ್ಯೆಯಾಗಿದೆ. ಆ ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಇದು ಚರ್ಚೆಗೆ ಬರುವಾಗ ಎದ್ದು ಹೋದರು.

ಶ್ರೀ ಜಿ. ಬಸವಣ್ಣಪ್ಪ.—ಸಂಬಂಧಪಟ್ಟ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ.

ಅಧ್ಯಕ್ಷರು.—ಸ್ಟೇಟ್‌ಮೆಂಟ್ ರೆಡಿ ಇದ್ದರೆ ತಿಳಿಸುವುದಕ್ಕೆ ಹೇಳುತ್ತೇನೆ. ಉತ್ತರ ಇವತ್ತು ಬಂದರೆ ಅವಕಾಶ ಕೊಡುತ್ತೇನೆ.

ಶ್ರೀ ವಸಂತ ಬಂಗೇರ.—ಮಾನ್ಯ ಸದಸ್ಯರು ಗೈರು ಹಾಜರು.

(೭) ಗಂಗಾವತಿಯ ಮರಳಿ ಸಕ್ಕರೆ ಕಾರ್ಖಾನೆ ಮುಚ್ಚಿರುವುದರಿಂದ ರೈತರಿಗೆಆಗಿರುವ ತೊಂದರೆ.

ಶ್ರೀ ಶ್ರೀರಂಗದೇವರಾಯಲು (ಗಂಗಾವತಿ).—ಮಾನ್ಯ ಅಧ್ಯಕ್ಷರೇ, ಗಂಗಾವತಿ ತಾಲ್ಲೂಕಿನ ಮರಳಿ ಸಕ್ಕರೆ ಕಾರ್ಖಾನೆ ಕೆಲವು ವರ್ಷಗಳಿಂದ ನಡೆಯದೆ ನಿಂತಿದ್ದು, ರೈತರು ಅವರು ಬೆಳೆದ ಕಬ್ಬನ್ನು ಬಹಳ ದೂರದ ಕಾರ್ಖಾನೆಗಳಿಗೆ ಸಾಗಿಸುವ ತೊಂದರೆಯನ್ನು ಸುಮಾರು ೪-೫ ವರ್ಷ ಗಳಿಂದಲೂ ಅನುಭವಿಸುತ್ತಾ ಬಂದಿದ್ದಾರೆ. ಈ ವರ್ಷ ರೈತರು ಸುಮಾರು ೩ ಸಾವಿರ ಎಕರೆ ಜಮೀನಿನಲ್ಲಿ ಕಬ್ಬು ಬೆಳೆದಿದ್ದು ಕಾರ್ಖಾನೆಯನ್ನು ಪ್ರಾರಂಭಿಸದಿದ್ದಲ್ಲಿ ರೈತರು ಬಹಳ ತೊಂದರೆಯನ್ನು ಎಂದಿನಂತೆ ಎದುರಿಸಬೇಕಾಗುತ್ತದೆ. ಆದ್ದರಿಂದ ಈಗಲಾದರೂ ಸರಕಾರದವರು ಶೀಘ್ರ ಕ್ರಮ ಕೈಕೊಂಡು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಿದಲ್ಲಿ ರೈತರಿಗೆ ತುಂಬಾ ಅನುಕೂಲವಾಗುವುದರಿಂದ ಸದರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಸಂಬಂಧಪಟ್ಟವರಿಗೆ ಆದೇಶ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನನಗೆ ಗೊತ್ತಿರುವ ಮಟ್ಟಿಗೆ ಅಲ್ಲಿ ಕಬ್ಬು ಬೆಳೆಯುವವರಿಗೆ ತೊಂದರೆಯಾಗ ಬಾರದು ಎಂದೇ ಕಂಪನಿಗಳವರು, ಫ್ಯಾಕ್ಟರಿಗಳವರು ತೆಗೆದುಕೊಳ್ಳುತ್ತಿದ್ದಾರೆ ಮತ್ತು ಬೇರೆ ಕಡೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿ ಕೊಟ್ಟಿದ್ದೇವೆ. ಕಬ್ಬು ಬೆಳೆಯತಕ್ಕವರಿಗೆ ತೊಂದರೆಯಾಗಿಲ್ಲ ಎಂದು ನನ್ನ ಭಾವನೆ. ಆದರೂ ಅವರ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ನೆಕ್ಸ್ಟ ಆರ್. ರಾಮಯ್ಯ...

ಶ್ರೀರಂಗದೇವರಾಯಲು.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ಕೂಡ್ರಿ. ಯಾರು ಹೇಳಿದರೂ ಕೊಡುವುದಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅಂತಃ ಕರಣದ ಆಧಾರದ ಮೇಲೆ ಕೊಡಿ ಸಾರ್. ಕಾಯ್ದೆ ಮೇಲೆ ಬೇಡಿ.

ಅಧ್ಯಕ್ಷರು.—ಅವಕಾಶ ಕೊಡುವುದಿಲ್ಲ ನಿಮಗೆ. ಹರಿಹರ ಬ್ರಹ್ಮರು ಹೇಳಿದರೂ ಕೊಡುವುದಿಲ್ಲ. ದಯವಿಟ್ಟು ಕೂಡ್ರಿ. ನಾನು ಅವಕಾಶ ಕೊಟ್ಟರೆ ಇವರು ಎದ್ದೇಳುತ್ತಾರೆ. ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೆ. ದಯವಿಟ್ಟು ಕೂಡ್ರಿ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಅದಕ್ಕೆ ಸಂಬಂಧಪಟ್ಟ ವಿವರಣೆ ಇದೆ. ಅದನ್ನು ಓದಿ ಹೇಳುತ್ತೇನೆ.

ಗಂಗಾವತಿ ಸಕ್ಕರೆ ಕಾರ್ಖಾನೆ, ಗಂಗಾವತಿಯು ೧೯೮೪-೮೫ನೇ ಸಾಲಿನಿಂದ ತನ್ನ ಕಬ್ಬು ಅರೆಯುವ ಕಾರ್ಯವನ್ನು ಈ ಕೆಳಕಂಡ ಕಾರಣಗಳಿಗಾಗಿ ನಿಲ್ಲಿಸಿದೆ.

(೧) ಹಿಂದಿನ ಎರಡು ವರ್ಷಗಳಿಂದ ತುಂಗಭದ್ರಾ ಎಡದಂಡೆ ನಾಲೆಯು ಪ್ರತಿ ವರ್ಷ ಬೇಸಿಗೆ ಕಾಲದಲ್ಲಿ ೭೫ ದಿನಗಳು ದುರಸ್ಥಿತಿ ಕಾರ್ಯ ಕೈಗೊಳ್ಳಲು ಮುಚ್ಚಲಾಗುತ್ತಿದ್ದು, ನೀರಿನ ವ್ಯವಸ್ಥೆ ಸಾಗುವಳಿಗೆ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ಈ ಕಾರಣದಿಂದಾಗಿ ರೈತರು ಕಬ್ಬು ನಾಟಿಯ ಕಾರ್ಯ ಕೈಗೊಳ್ಳಲು ಸಾಧ್ಯವಾಗದೆ ನಿರೀಕ್ಷಿಸಿದಂತೆ ಕಬ್ಬಿನ ಬೆಳೆ ಬೆಳೆದಿರುವುದಿಲ್ಲ.

(೨) ಸದರಿ ಸಕ್ಕರೆ ಕಾರ್ಖಾನೆಯು ದಿನ ಪ್ರತಿ ಅರೆಯುವ ಸಾಮರ್ಥ್ಯ ೨೫೦೦ ಮೆ. ಟನ್‌ಗಳಷ್ಟಾಗಿದ್ದು ಈ ಕಾರ್ಖಾನೆಯ ಕಾರ್ಯಕ್ಷೇತ್ರದಲ್ಲಿ ಕಾರ್ಖಾನೆಗೆ ಬೇಕಾದಷ್ಟು ಕಬ್ಬು ದೊರೆಯದೇ ಇರುವುದು.

(೩) ಕೇಂದ್ರಿಯ ಬ್ಯಾಂಕ್‌ಗಳಾದ ಐ.ಡಿ.ಬಿ.ಐ. ಹಾಗೂ ಇತರೆ ಹಣಕಾಸು ಸಂಸ್ಥೆಗಳು ಸೇರಿ ಅವಧಿ ಸಾಲಗಳನ್ನು ಮರುಪಾವತಿ ಮಾಡಲು ಜೂನ್ ೧೯೮೫ ರಲ್ಲಿ ಕಾರ್ಖಾನೆಗೆ ನೋಟೀಸ್ ಕೊಡಲಾಗಿರುತ್ತೆ. ಅದರಂತೆ ಈ ಕಾರ್ಖಾನೆಯು ಸದರಿ ಸಂಸ್ಥೆಗಳಿಗೆ ಸುಮಾರು ೧೮-೦೦ ಕೋಟಿ ರೂ. ಗಳಷ್ಟು ಸಾಲ (ಅಸಲು ಬಡ್ಡಿ ಸೇರಿ) ಬಾಕಿ ಯಾಗಿರುತ್ತೆ. ಇದನ್ನು ಪುನಃ ಶೆಡ್ಯೂಲಿಂಗ್ ಮಾಡುವ ಸಲುವಾಗಿ ಪುನಃ ಶೆಡ್ಯೂಲಿಂಗ್ ವರದಿ ಯನ್ನು ಕೇಂದ್ರೀಯ ಬ್ಯಾಂಕ್‌ಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಕಾರ್ಖಾನೆಯು ತಯಾರಿಸಿ ಒಪ್ಪಿಸಿರುವುದಾಗಿ ತಿಳಿಸಿರುತ್ತೆ. ಅವಧಿ ಸಾಲ ಮರು ಪಾವತಿಗೆ ರಾಜ್ಯ ಸರ್ಕಾರ ಗ್ಯಾರಂಟಿ ಕೊಟ್ಟಲ್ಲಿ ಐ. ಡಿ. ಬಿ. ಐ. ನವರು ಪುನಶ್ಚೇತನ ಮಾಡುವರೆಂದು ಭರವಸೆ ನೀಡಲಾಗಿರುತ್ತೆ. ಈ ವಿಷಯ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿರುತ್ತೆ.

೧೯೮೬-೮೭ನೇ ಸಾಲಿನಲ್ಲಿ ಗಂಗಾವತಿ ಸಕ್ಕರೆ ಕಾರ್ಖಾನೆಯು ಪ್ರಾರಂಭಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಕಾರ್ಖಾನೆಯು ಮೇಲ್ಕಂಡ ಕಾರಣಗಳಿಂದಾಗಿ ನಿರೀಕ್ಷಿಸಿದಂತೆ ಪ್ರಾರಂಭ ಮಾಡದೆ ಇದ್ದುದರಿಂದ ೩೦೦೦ ಎಕ್ರೆ ಪ್ರದೇಶದಲ್ಲಿ ಬೆಳೆದ ಕಾರ್ಖಾನೆಯ ಕಾರ್ಯವ್ಯಾಪ್ತಿಯಲ್ಲಿ ಬೆಳೆದಿರುವ (ಸುಮಾರು ಒಂದು ಲಕ್ಷ ಟನ್) ಕಬ್ಬಿನ ಬೆಳೆಗಾರರಿಗೆ ತೊಂದರೆಯಾಗದಂತೆ ಆ ಕ್ಷೇತ್ರದಲ್ಲಿ ಬೆಳೆದು ನಿಂತಿರುವ ಕಬ್ಬನ್ನು ಪಕ್ಕದ ಕಾರ್ಖಾನೆಗಳಾದ ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ, ಕಂಪ್ಲಿ ಮತ್ತು ಕೊಥಾರಿ ಸಕ್ಕರೆ ಕಾರ್ಖಾನೆ, ಸಿರಗುಪ್ಪ ಇವು ತಮ್ಮ ಸಕ್ಕರೆ ಕಾರ್ಖಾನೆಗೆ ಒಯ್ಯಲು ಅಪೇಕ್ಷಿಸಿದ್ದು, ಗಂಗಾವತಿ ಕ್ಷೇತ್ರದ ರೈತರಿಗೆ ಹೆಚ್ಚುವರಿ ಬೆಲೆಯಾಗಿ ೩೫-೦೦ ರೂಪಾಯಿಗಳನ್ನು ಕೊಟ್ಟು ಸ್ವೀಕರಿಸಬಹುದೆಂದು ಸರ್ಕಾರ ಆದೇಶಿಸಿದೆ.

ಗಂಗಾವತಿ ಸಕ್ಕರೆ ಕಾರ್ಖಾನೆಯು ಪುನಃ ಪ್ರಾರಂಭವಾಗಬೇಕಾದರೆ ಮೇಲ್ಕಾಣಿಸಿದ ತೊಂದರೆಗಳು ನಿವಾರಣೆಯಾದಲ್ಲಿ ಮಾತ್ರ ಕಾರ್ಖಾನೆಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ಅಲ್ಲದೆ ಕೈಗಾರಿಕಾ ಮಂತ್ರಿಗಳ ಆದೇಶದಂತೆ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಗಂಗಾವತಿ ಸಕ್ಕರೆ ಕಾರ್ಖಾನೆಯನ್ನು ಪುನಃ ಕ್ಷೇತನಮಾಡುವ ಸಾಧ್ಯತೆಗಳನ್ನು ಪರಿಶೀಲಿಸಲು ನೇಮಕ ಮಾಡಲಾಗಿದೆ. ಸಮಿತಿಯ ವರದಿ ಬಂದ ಮೇಲೆಸೂಕ್ತ ಕ್ರಮ ಕೈಗೊಳ್ಳಲಾಗುವುದು.

೭ (೨) ಚಿತ್ರದುರ್ಗ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯು ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಅಧ್ಯಕ್ಷತೆಯಿಂದ ರೈತರಿಗೆ ಉಂಟಾದ ಸಂಕಷ್ಟಗಳು

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ಇಲಾಖೆಯು ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಅಧ್ಯಕ್ಷತೆಯ ಸೇವೆಯಿಂದಾಗಿ ಹಿರಿಯೂರು ತಾಲ್ಲೂಕಿನಲ್ಲಿ ಈ ಕೆಳಕಂಡ ಸಂಕಷ್ಟಗಳನ್ನು ರೈತ ಸಮುದಾಯ ಮತ್ತು ವೈಯಕ್ತಿಕತೆಯ ಕಿರಿಕಿರಿಯನ್ನು ಅನುಭವಿಸಬೇಕಾಗಿದೆ.

(೧) ಇತ್ತೀಚಿನ ಮಳೆಯಿಂದಾಗಿ ಪಾಣಿವಿಲಾಸ ಕೆರೆಗೆ ೮೦ ಅಡಿಗಳಷ್ಟು ನೀರು ಬಂದಿದ್ದು ಇದನ್ನು ಒಹು ಜಾಗರೂಕತೆಯಿಂದ ಉಪಯೋಗಿಸಿದರೆ ಬೇಸಿಗೆಯಲ್ಲಿ ತೆಂಗಿನ ಮರಗಳ ಸಂರಕ್ಷಣೆ ಮಟ್ಟಿಗೆ ಅರೆ-ನೀರಾವರಿ ಬೆಳೆಗಳನ್ನು ಬೆಳೆಯಬಹುದಾಗಿದೆ. ಆದರೆ ಅಕಾಲಿಕ ಮಳೆಬಿದ್ದ ಕಾರಣದಿಂದಾಗಿ ಕೆರೆಯ ಬತಾವಾಲೆ ಪಿಟ್ಸಾಲಿ ಗ್ರಾಮದ ಬಳಿ ಕೊಚ್ಚಿಹೋಗಿದ್ದರಿಂದ ರಿಪೇರಿ ಕೆಲಸ ಮುಗಿದ ೨-೩ ದಿನಗಳಲ್ಲೇ ಕೆರೆಯ ತೂಬನ್ನು ಎತ್ತಿ ನೀರು ಬಿಟ್ಟಾಗ ಮತ್ತೆ ಕಾಲುವೆ ಒಡೆದು ಹೋಯಿತು. ಇದರಿಂದಾಗಿ ರೈತರಿಗೆ ನೀರಿನ ಪೂರೈಕೆ ಆಗುವುದರ ಜೊತೆಗೆ ಇಟ್ಟ ಬೆಳೆಗೆ ನೀರನ್ನು ಹಾಯಿಸುವ ದಿನಗಳ ವ್ಯತ್ಯಾಸದಿಂದಾಗಿ ಬೆಳೆಗೆ ಹಾನಿಯಾಗುತ್ತದೆ.

(೨) ಈ ಕೆರೆಯ ಎರಡು ಸಾಲಿಗೆಗಳಲ್ಲೂ ಬೇಕಾದಷ್ಟು ಅನಧಿಕೃತ ಪಂಪ್ ಸೆಟ್ಟುಗಳಿದ್ದು ಅವರೆಲ್ಲರೂ ನಿರ್ಭಯರಾಗಿ ಸಾಲೆಯ ನೀರನ್ನೇ ಬಾವಿಗೆ ನೇರವಾಗಿ ಬಿಟ್ಟುಕೊಂಡು ಬೆಳೆ ಬೆಳೆಯುತ್ತಿರುವಾಗ, ಮೊನ್ನೆ ಇಂಥಹದೇ ಐ. ಪಿ. ಸೆಟ್‌ನ ಮಾಲೀಕರಾದ ಶ್ರೀಮತಿ ಮಲ್ಲಮ್ಮ ವೈಫ್ ಆಫ್ ರಂಗಸ್ವಾಮಿ ಪಾಣಿವಿಲಾಸಪುರ ಗ್ರಾಮವವರ ಪಂಪ್ ಸೆಟ್ಟನ್ನು ರಾಜಕೀಯ ದುರ್ಲಾಭಕ್ಕಾಗಿ ಮುಟ್ಟಿಸಿ ಅದನ್ನೇ ಜೀವನಕ್ಕೆ ಆಶ್ರಯಿಸಿದ್ದ ೭-೮ ಎಕರೆ ಭೂಮಿಯನ್ನು ಬೀಳುಬಿಡುವಂತೆ ಮಾಡಿರುತ್ತಾರೆ. ಅರ್ಜಿದಾರಳು ಕೇಳಿಕೊಂಡಾಗ್ಯೂ ಹಣ ಕೊಡಿರುವುದಾಗಿ ತಿಳಿದಿದೆ. ಅನಧಿಕೃತ ಐ. ಪಿ. ಸೆಟ್‌ಗಳ ಮೇಲೆ ಹಿಡಿತವಿಲ್ಲದೆ ಬಾಯಿಲ್ಲದ ಮತ್ತು ಕೆಲವರನ್ನು ಸಂಪ್ರೀತರನ್ನಾಗಿಸಲು ಉಪಟಳ ಕೊಡುತ್ತಿರುವುದು ದೈನಂದಿನ ಕೆಲಸವಾಗಿದೆ.

(೩) ಎಡನಾಲೆಯ ದೊಡ್ಡಘಟ್ಟ ಗ್ರಾಮದ ಬಳಿ ಇಲಾಖೆಗೆ ಸೇರಿದ್ದ ಎರಡು ದೊಡ್ಡ ಮರಗಳನ್ನು ಕಡಿದಾಗ ಗ್ರಾಮಸ್ಥರೇ ದೂರು ಕೊಟ್ಟರೂ ಸಹಾ ಶಾಮೀಲಾಗಿ ಯಾವ ಕ್ರಮ ಜರುಗಿಸದೇ ಅವರಿಗೆ ಮರಗಳನ್ನು ಕೊಟ್ಟಿರುವುದು ಇಲಾಖೆಯಲ್ಲಿನ ಇವರ ಕೈಕೆಳಗಿನ ಅಧಿಕಾರಿಗಳಂತೆ ಕೆಲಸ ನಿರ್ವಹಿಸುವುದಕ್ಕೆ ಇದೊಂದು ಸ್ಪಷ್ಟ ನಿದರ್ಶನ.

(೪) ಈ ಹಿಂದೆಯೂ ಸಂಬಂಧಿಸದ ಮಂತ್ರಿಗಳು ಎನ್. ಓ. ಸಿ. ಯನ್ನು ಕೊಡುವುದರ ಬಗ್ಗೆ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರಿಗೆ ಅಧಿಕಾರ ಕೊಟ್ಟಿರುತ್ತಾರೆ. ಆದರೆ ಇದನ್ನು ಕೊಡುವಾಗಲೂ ಸಹಾ ಬಡರೈತರನ್ನು ನಿರ್ಲಕ್ಷಿಸಿ ಉಳ್ಳವರೆ ಮನೆ ಬಾಗಿಲಿಗೆ ಎನ್. ಒ. ಸಿ. ಯನ್ನು ಕೊಡುವ ಕಾರಣದಿಂದಾಗಿ ೧೯೮೫ ರಿಂದ ೧೯೮೭ ರವರೆಗೆ ಎಷ್ಟು ಐ. ಪಿ ಸೆಟ್‌ಗಳು ಆಗಿವೆ ಎಂಬುದನ್ನು ಪರಿಶೀಲಿಸಿದರೆ ಇವರ ಕಾರ್ಯವೈಖರಿ ತಿಳಿಯುತ್ತದೆ.

(೫) ಹಿರಿಯೂರು ತಾಲ್ಲೂಕಿನಲ್ಲಿರುವ ಪುರಾತನ ಸಣ್ಣ ಪುಟ್ಟ ಕೆರೆಗಳ ದುರಸ್ತಿಯ ಬಗ್ಗೆ ಲವಲೇಶವಾ ಕಾಳಜಿ ಇಲ್ಲದಿರುವುದರ ಬಗ್ಗೆಯೇ ರಂಗೇನದಳ್ಳಿ ಕೆರೆ ಹೂಡಿದು ಐದು ಲಕ್ಷ ರೂಪಾಯಿ ಕಟ್ಟಲು ರಾಜ್ಯ ಬೊಕ್ಕಸಕ್ಕೆ ಹೊರೆಯಾಗಿದ್ದು ಇದೇ ರೀತಿಯಲ್ಲಿ ಅನೇಕ ಗ್ರಾಮಗಳ ಕೆರೆಗಳು ಹೂಳೆಯುವ ಅಂತಮನ್ನು ತಲುಪಿದ್ದರೂ ಜಿಲ್ಲಾಧಿಕಾರಿಗಳು ಭೇಟಿ ಕೊಟ್ಟರು, ಇಲಾಖೆಯು ಮುತುವರ್ಜಿಯನ್ನು ವಹಿಸಿದರು ನಿಧಾನವಾಗಿ ಭೇಟಿ ಕೊಡುವುದು.

(೬) ಎರಡು ನಾಲೆಗಳಲ್ಲೂ ಹೂಳು ತೆಗೆಯುವ ಕೆಲಸವಿಲ್ಲ. ಇದರಿಂದಾಗಿ ನೀರು ನಾಲೆಯಿಂದ ಹೊರಹರಿದು ದುರುಪಯೋಗವಾಗುತ್ತಿದ್ದರೂ ಕಾಣದಂತೆ ಸುಮ್ಮನಿರುವುದು.